ಓ.ಎಸ್‌: 8/2009

ಪಿ.ಡಬ್ಲ್ಯೂ: 03

**<u>ದಿನಾಂಕ: 04-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು 2 ನೇ ಪ್ರತಿವಾದಿಯ ಪರ ಶ್ರೀ ಎ.ಕೆ.ಜಿ. ವಕೀಲರಿಂದ:</u>**

1. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲಿಷ್ ಓದಲು ಬರೆಯಲು ಬರುವುದಿಲ್ಲ. ನನ್ನ ಖುದ್ದು ಊರು ಚಿನಗುಂಡಿ. ವಾದಿಯು 30 ವರ್ಷಗಳಿಂದ ಪರಿಚಯಸ್ಥರು ಆಗಿರುತ್ತಾರೆ. ನನ್ನನಿಂದ ವಾದಿಯು ಮೀನನ್ನು ಖರೀದಿ ಮಾಡುವ ಕಾರಣ ಪರಿಚಯಸ್ಥರು ಆಗಿರುತ್ತಾರೆ. ವಾದಿಯು ಯಾವ ಉದ್ಯೋಗ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ. ನನ್ನ ಹೆಸರಿನಲ್ಲಿ ಜಮೀನು ಇರುವುದಿಲ್ಲ. ಸಾಕ್ಷಿ ನುಡಿಯಲು ವಾದಿಯು ನನ್ನ ಕಳುಹಿಸಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ವಾದಿಯು ನನಗೆ ಸಾಕ್ಷಿ ದಿನಾಂಕವನ್ನು ತಿಳಿಸಿರುತ್ತಾನೆ.

2. ಚಿನಗುಂಡಿ ಗ್ರಾಮದಿಂದ ಜಮಖಂಡಿಗೆ 13 ಕಿ.ಮೀ ಅಂತರ ಇರುತ್ತದೆ. 1 ನೇ ಪ್ರತಿವಾದಿಯು ಕಲಬುರ್ಕಿ ಗ್ರಾಮದವರು ಆಗಿದ್ದು ಅವರ ತಾಯಿ ಊರು ಚಿನಗುಂಡಿ ಆಗಿರುತ್ತದೆ. 1 ನೇ ಪ್ರತಿವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ನೇ ಪ್ರತಿವಾದಿಯ ತಂದೆ ಹೆಸರು ಬಸಪ್ಪ. ಅವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಯ ಸರ್ವೆ ನಂ.63 ಕ್ಷೇತ್ರ 31 ಎಕರೆ 35 ಗುಂಟೆ ಆಗಿರುತ್ತದೆ. ದಾವಾ ಆಸ್ತಿಯು ಕಲಬುರ್ಕಿಯಲ್ಲಿ ಇದ್ದು, ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಜಮೀನು ಫಲವತ್ತಾದ ಜಮೀನೋ ಯಾವ ಜಮೀನು ಎಂದು ನನಗೆ ಗೊತ್ತಿಲ್ಲ. 2006 ರಲ್ಲಿ ಕರಾರು ಪತ್ರವಾಗಿರುತ್ತದೆ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಮಾತುಕತೆಯು ಫಿಶ್ ಮಾರ್ಕೆಟನ ಅಂಗಡಿಯಲ್ಲಿ ಮಾತುಕತೆ ಆಗಿರುತ್ತದೆ. ಸದರಿ ಅಂಗಡಿ ಮುನಿಸಿಪಾರ್ಟಿಯವರದ್ದು ಆಗಿರುತ್ತದೆ. ಒಟ್ಟು 6 ಜನ ಇದ್ದೇವು. ನಾನು, ಶ್ರೀಶೈಲ್, ನಜೀರ, ಬಾಬು ನಾಗರಾಳ, ಸೈಯದ್ ಕಂಗನಳ್ಳಿ, ರಮೇಶ ಮೋರೆ ಇದ್ದೇವು.

4. ನಮ್ಮ ಸಮಕ್ಷಮ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ರೂ.1,30,000/- ಹೇಳಿದ್ದು, ರೂ.1,10,000/- ಕ್ಕೆ ಮಾತುಕತೆ ಆಗಿರುತ್ತದೆ. ನಾವು 4 ಜನ ವ್ಯವಹಾರ ಮಾಡಿರುತ್ತೇವೆ. 1ನೇ ಪ್ರತಿವಾದಿಗೆ ಸಾಲ ಇರುವ ಕಾರಣ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ವೈಯಕ್ತಿಕವಾಗಿ ಎಷ್ಟು ಸಾಲ ಇರುತ್ತದೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ವ್ಯವಹಾರವನ್ನು ರೂ.1,10,000/- ಕ್ಕೆ ಮುಗಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾತುಕತೆ ಆದ ದಿನ ಹಣವನ್ನು ನೀಡಿರುವುದಿಲ್ಲ. ಸಾಮಾನ್ಯವಾಗಿ ಮಾತುಕತೆ ಆದರೆ ಮುಂಗಡ ಹಣ ನೀಡುತ್ತಾರೆ ಎಂದರೆ ಸರಿ.

5. ಮಾತುಕತೆ ಆದ ದಿನದಂದು ಪತ್ರ ವ್ಯವಹಾರ ಮಾಡಲು ಯಾವುದೇ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಂಜೆ ಆಗಿರುವ ಕಾರಣ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪತ್ರ ವ್ಯವಹಾರವನ್ನು ಜಮಖಂಡಿಯ ತಹಶೀಲ್ದಾರ ಕಛೇರಿಯ ಮುಂದುಗಡೆ ತಯಾರಿಸಲಾಗಿರುತ್ತದೆ. ಬಾಂಡ ರೈಟರ್ ತಯಾರಿಸಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ಬಾಂಡ ರೈಟರ್ ಸಹಿ ಮಾಡಿದ ಬಗ್ಗೆ ನಾನು ನೋಡಿರುವುದಿಲ್ಲ. ಪತ್ರ ವ್ಯವಹಾರವನ್ನು ಟೈಪ್ ಮಾಡಿಸಿರುತ್ತಾರೆ. ಸದರಿ ಬಾಂಡನ್ನು 1ನೇ ಪ್ರತಿವಾದಿಯು ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ. 1ನೇ ಪ್ರತಿವಾದಿಯು ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಬಾಂಡನ್ನು ತಯಾರಿಸಿಕೊಂಡು ಬರಲು 1ನೇ ಪ್ರತಿವಾದಿಯ ಜೊತೆ ಯಾರು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಒಬ್ಬ ಬಾಂಡ್ ರೈಟರ್ ಸಹಿ ಮತ್ತು ಸೀಲನ್ನು ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಬಾಂಡನ್ನು ಟೈಪ್ ಮಾಡಿಸಲು ಹೋದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ನೆನಪಿಲ್ಲ. ನಾವು ಒಟ್ಟಿಗೆ ತಹಶೀಲ್ದಾರ ಕಛೇರಿಯ ಮುಂದೆ ಇದ್ದೇವು. ನಾನು ಹೇಳಿದಾಗ ಹಾಗೆ ನನ್ನ ಮುಖ್ಯ

ವಿಚಾರಣೆಯನ್ನು ವಕೀಲರು ತಯಾರಿಸಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ವ್ಯವಹಾರ ನನ್ನ ಸಮಕ್ಷಮ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು 1ನೇ ಪ್ರತಿವಾದಿಗೆ ಜಮಖಂಡಿಯ ತಹಶೀಲ್ದಾರ ಕಛೇರಿಯ ಎದುರುಗಡೆ ನೀಡಿರುತ್ತಾರೆ. ಹಣದ ಮುಖ ಬೆಲೆ 50 ಮತ್ತು 100 ರೂಪಾಯಿಗಳು ಆಗಿರುತ್ತವೆ. ಎಷ್ಟು ಬಂಡಲಗಳು ಇದ್ದವು ಎಂದು ನನಗೆ ಗೊತ್ತಿಲ್ಲ.

7. ಟೈಪ್ ಮಾಡಿಸಿಕೊಂಡು ಬಂದ ನಂತರ ಹಣವನ್ನು ನೀಡಿರುತ್ತಾರೆ. ಸಾಮಾನ್ಯವಾಗಿ ಹಣ ನೀಡಿದ ನಂತರ ಟೈಪ್ ಮಾಡಿಸುತ್ತಾರೆ ಎಂದರೆ ಸರಿ. ಸದರಿ ಜಮೀನು ಸರ್ಕಾರದವರು ನೀಡಿರುತ್ತಾರೆ ಎಂದು 1ನೇ ಪ್ರತಿವಾದಿ ತಿಳಿಸಿದ್ದರು. 1ನೇ ಪ್ರತಿವಾದಿಯು ಸರ್ಕಾರದಿಂದ ಪರವಾಣಿಗೆ ಪಡೆದುಕೊಳ್ಳಬೇಕೆಂದು ಕರಾರು ಪತ್ರದಲ್ಲಿ ಬರೆಸಲಾಗಿತ್ತು.

8. 1 ಎರಕೆ ಎಷ್ಟು ಮಾತು ಕತೆ ಆಗಿರುತ್ತದೆ ಎಂದರೆ ಸಾಕ್ಷಿಯ ಒಟ್ಟು 31 ಎಕರೆ 35 ಗುಂಟೆಗೆ ರೂ.1,10,000/- ಮಾತುಕತೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು 2 ರಿಂದ 4ನೇ ಪ್ರತಿವಾದಿಗೆ ಆಸ್ತಿ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರಲ್ಲಿಲ್ಲಾ, ಈಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 2007 ರಲ್ಲಿ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಾಗಿರುತ್ತದೆ.

9. 1ನೇ ಪ್ರತಿವಾದಿಯು ವಿದ್ಯಾಭ್ಯಾಸ ಮಾಡಿರುವುದಿಲ್ಲ, 1ನೇ ಪ್ರತಿವಾದಿಗೆ ಓದಲು ಬರೆಯಲು ಬರುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಯಾವ ರೀತಿ ಸಹಿ ಮಾಡುತ್ತಾರೆ ಎಂದು ನನಗೆ ಗೊತ್ತಾಗುತ್ತದೆ. ಸಾಕ್ಷಿಗೆ ನಿಡಿ-1 ನು ತೋರಿಸಿದ್ದು, ಅದರಲ್ಲಿ ಇರುವ ಸಹಿ 1ನೇ ಪ್ರತಿವಾದಿಯ ಸಹಿ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ನಮ್ಮ ಸಮಕ್ಷಮ ಸಹಿ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಸಹಿಯನ್ನು ಮೊದಲು ಇಂಗ್ಲೀಷನಲ್ಲಿ ಮಾಡಿ ನಂತರ ಕನ್ನಡದಲ್ಲಿ ಮಾಡುತ್ತೇನೆ. KIDB ರವರು ದಾವಾ ಆಸ್ತಿಯನ್ನು ಸ್ವಾಧಿನಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು 1ನೇ ಪ್ರತಿವಾದಿಯ ಕಬ್ಜಾ ವಹಿವಾಟಿಯಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**